# ಗ್ರಾಹಕ ಮನೋಭಾವ

"*ತ್ಯಾಗದ ಮೂಲಕ ಭೋಗಿಸು*" (ತೇನ ತ್ಯಕ್ತೇನ ಭುಂಜೀಥಾಃ) ಎಂದು ಈಶಾವಾಸ್ಯ ಉಪನಿಷತ್ತು ಹೇಳುತ್ತದೆ. ಇಲ್ಲಿ ಭೋಗವೆಂದರೆ ಕೇವಲ ಇಂದ್ರಿಯಸುಖವಲ್ಲ, ನಾವು ಗ್ರಾಹಕರಾಗಿ (*consumers*) ವ್ಯಕ್ತಿಗಳಿಂದ, ಸಮಾಜದಿಂದ ಮತ್ತು ಪ್ರಕೃತಿಯಿಂದ ಏನೇನು ಸ್ವೀಕರಿಸುತ್ತೇವೊ ಅವೆಲ್ಲವೂ. ಈ ರೀತಿ ಸ್ವೀಕರಿಸುವುದೂ ತ್ಯಾಗವನ್ನು ಅವಲಂಬಿಸಿರಬೇಕು ಎಂದು ಉಪನಿಷತ್ತು ಹೇಳುತ್ತದೆ—ಅಂದರೆ ಸ್ವೀಕರಿಸುವುದರ ಜೊತೆಗೆ ನೀಡುವುದನ್ನೂ ನಾವು ಕಲಿಯಬೇಕು. ಆದರೆ ಇಂದಿನ ವಾಣಿಜ್ಯಸಂಸ್ಕೃತಿಯ ಪ್ರಭಾವದಿಂದ ಗ್ರಾಹಕ ಮನೋಭಾವ ತೀವ್ರಗೊಳ್ಳುತ್ತಿದ್ದು ತ್ಯಾಗದ ಭಾವನೆ ಹಿಂದೆ ಸರಿಯುತ್ತಿದೆ. ವಾಣಿಜ್ಯಸಂಸ್ಕೃತಿ ಮಾನವನಿಗೆ ಸಂಬಂಧಿಸಿದ ಎಲ್ಲ ಕ್ಷೇತ್ರವನ್ನೂ ವ್ಯಾಪಿಸಿಕೊಂಡಿದೆ. ವಾಣಿಜ್ಯವೇ ಒಂದು ಪ್ರತ್ಯೇಕ ಕ್ಷೇತ್ರವಾಗಿ ಉಳಿಯದೆ ಎಲ್ಲ ಕ್ಷೇತ್ರವೂ ವಾಣಿಜ್ಯಮಯವಾಗಿರುವುದು. ಈ ವ್ಯಾಪಾರೀಕರಣದ ಸರ್ವವ್ಯಾಪಿತ್ವವು ಮಾನವನು ತನ್ನನ್ನು ಹೆಚ್ಚು ಹೆಚ್ಚು ಗ್ರಾಹಕನನ್ನಾಗಿ ಗುರುತಿಸಿಕೊಳ್ಳುವಂತೆ ಒತ್ತಾಯಿಸುತ್ತಿದೆ. ಖ್ಯಾತ ಮನಃಶಾಸ್ತ್ರಜ್ಞನೂ ಸಮಾಜಶಾಸ್ತ್ರಜ್ಞನೂ ಆದ ಎರಿಕ್ ಫ್ರೊಮ್ (*Erich Fromm*) ಹೇಳುವಂತೆ, "ಹತ್ತೊಂಭತ್ತನೇ ಶತಮಾನದ ಮುಖ್ಯ ಸಾಮಾಜಿಕ ಲಕ್ಷಣವನ್ನು ಗಳಿಕೆಯ ಪ್ರವೃತ್ತಿ ಎಂದು ಕರೆಯಬಹುದಾದರೆ ಇಪ್ಪತ್ತನೆಯ ಶತಮಾನದ ಸಾಮಾಜಿಕ ಲಕ್ಷಣವನ್ನು ಬಳಕೆಯ ಪ್ರವೃತ್ತಿ ಎಂದು ಕರೆಯಬಹುದು."

> ನಾವೆಲ್ಲ ವ್ಯಾಪಾರಿಗಳು.
> ನಾವು ಜೀವನ ವಿಷಯದಲ್ಲಿ ವ್ಯಾಪಾರಿಗಳು,
> ನಾವು ಸದ್ಗುಣದ ವಿಷಯದಲ್ಲಿ ವ್ಯಾಪಾರಿಗಳು,
> ಧರ್ಮದ ವಿಷಯದಲ್ಲಿಯೂ ವ್ಯಾಪಾರಿಗಳು.
> ಅಯ್ಯೋ ! ಪ್ರೀತಿಯ ವಿಷಯದಲ್ಲೂ ನಾವು ವ್ಯಾಪಾರಿಗಳು.
> — *ಸ್ವಾಮಿ ವಿವೇಕಾನಂದ*

## ವಾಣಿಜ್ಯದ ಸರ್ವವ್ಯಾಪಕತೆ

ಯಾವುದೇ ವಸ್ತುವನ್ನು ಕೊಂಡುಕೊಳ್ಳಲು ನಾವು ಮಾರುಕಟ್ಟೆಗೆ ಹೋದಾಗ ಈ ಗ್ರಾಹಕತ್ವದ ಬಿಸಿ ನಮಗೆ ತಟ್ಟುತ್ತದೆ. ಹಲವಾರು ವಸ್ತುಗಳನ್ನು ಪ್ರದರ್ಶಿಸುವ ಹಲವಾರು ಸುಂದರ ಅಂಗಡಿಗಳು ಹೂವು ದುಂಬಿಗಳನ್ನು ಆಕರ್ಷಿಸುವಂತೆ ಆಕರ್ಷಿಸುತ್ತವೆ; ಒಂದೇ ಬಳಕೆಯ ವಿಧವಿಧವಾದ ವಸ್ತುಗಳು ವಿವಿಧಾಕರ್ಷಣೆಗಳಿಂದ ಗ್ರಾಹಕರ ಮನಸ್ಸನ್ನು ಸೂರೆಗೊಳ್ಳಲು ಪ್ರಯತ್ನಿಸುತ್ತವೆ; ನಯನಾಜೂಕಿನ ಮಾತು ನಡವಳಿಕೆಗಳ ಮೂಲಕ ವ್ಯಾಪಾರಿಗಳು ಗ್ರಾಹಕರ ಜೇಬನ್ನು ಖಾಲಿಮಾಡಲು ಸದಾ ಸಿದ್ಧರಾಗಿರುತ್ತಾರೆ; ವಿವಿಧ ಮಾಧ್ಯಮಗಳ ಮೂಲಕ ಕಾಣಿಸಿಕೊಳ್ಳುವ ಅನೇಕಾನೇಕ ಜಾಹಿರಾತುಗಳು ಆಸೆಯನ್ನು ಕೆರಳಿಸಿ ತಮ್ಮ ತಮ್ಮ ಸರಕುಗಳು ಬಹುಬೇಗ ಮಾರಾಟವಾಗುವಂತೆ ಮಾಡಲು ಪರಸ್ಪರ ಸ್ಪರ್ಧಿಸುತ್ತವೆ. ಈ ಜಾಹಿರಾತೇ ಒಂದು ವಿಜ್ಞಾನವಾಗುವಷ್ಟರ ಮಟ್ಟಿಗೆ ಬೆಳೆದು ಬಿಟ್ಟಿದೆ. ಹೀಗೆಯೇ ಶಿಕ್ಷಣಕ್ಷೇತ್ರದಲ್ಲಿಯೂ ಮಾನವನು ಗ್ರಾಹಕ ನಾಗುತ್ತಾನೆ. ಮಗುವು ಹುಟ್ಟಿದ ಕೆಲವೇ ವರ್ಷಗಳಲ್ಲಿಯೇ ಅದು ಶಿಕ್ಷಣದ ಅಂಗಡಿಯನ್ನು ಪ್ರವೇಶಿಸಬೇಕಾಗುತ್ತದೆ. ಮಗು ಬೆಳೆದು ದೊಡ್ಡವನಾದ ಮೇಲೆ ಶಿಕ್ಷಣದ ವಿವಿಧ ಶಾಖೆಗಳು (*courses*) ಅವನನ್ನು ಆಕರ್ಷಿಸತೊಡಗುತ್ತವೆ. ತಂದೆ ತಾಯಿಗಳ ಒತ್ತಡ, ಸಮಾಜದ ಒತ್ತಡ, ಶಿಕ್ಷಣ ಸಂಸ್ಥೆಗಳ ಒತ್ತಡ ಇವುಗಳಿಂದಾಗಿ ವಿದ್ಯಾರ್ಥಿಯು, ಇಷ್ಟೆಲ್ಲ ವೈವಿಧ್ಯ ಇದ್ದರೂ, ತನ್ನ ಮನೋಧರ್ಮಕ್ಕನುಗುಣವಾದ ಶಿಕ್ಷಣವನ್ನು ಪಡೆಯಲಾಗುವುದಿಲ್ಲ. ಒಂದೊಂದು ಕೋರ್ಸಿಗೆ ಒಂದೊಂದು ಬೆಲೆ, ಒಂದೊಂದು ಸೀಟಿಗೆ ಒಂದೊಂದು ಬೆಲೆ—ಎಲ್ಲ ಮಾರುಕಟ್ಟೆಯಂತೆಯೇ. ವೈದ್ಯಕೀಯ ಕ್ಷೇತ್ರದಲ್ಲಿಯೂ ರೋಗಿಯು ರೋಗಿಯಾಗಿ ಉಳಿಯದೆ ಒಬ್ಬ ಗ್ರಾಹಕನಾಗುತ್ತಾನೆ. ಔಷಧೋಪಚಾರಗಳೆಲ್ಲ ಮಾರುಕಟ್ಟೆಯ ನಿಯಮಗಳನ್ನೇ ಅನುಸರಿಸುತ್ತವೆ. ರಾಜಕೀಯದಲ್ಲಿಯೂ ಮೊದಲು ಮತವ್ಯಾಪಾರ, ಅನಂತರ ಕುದುರೆ ವ್ಯಾಪಾರ, ಕೊನೆಗೆ ರಾಜಕಾರಣ ದೊಡ್ಡ ಹಗರಣವಾಗಿ ಪರಿಣಮಿಸುವುದು. ಧಾರ್ಮಿಕ ಕ್ಷೇತ್ರವನ್ನು ತೆಗೆದುಕೊಂಡರೆ ಎಲ್ಲ ದೇವಸ್ಥಾನಗಳೂ ವ್ಯಾಪಾರಕೇಂದ್ರಗಳಾಗಿವೆ. ದೇವರ ದರ್ಶನಕ್ಕೆ ಒಂದು ಬೆಲೆ, ತೀರ್ಥಕ್ಕೆ ಒಂದು ಬೆಲೆ, ಪ್ರಸಾದಕ್ಕೆ ಒಂದು ಬೆಲೆ, ವಿವಿಧ ಸೇವೆಗಳಿಗೆ ಒಂದೊಂದು ಬೆಲೆ, ಬೇರೆ ಬೇರೆ ಧ್ಯಾನವಿಧಾನಗಳನ್ನು ಕಲಿಯಲು ಬೇರೆ ಬೇರೆ ಬೆಲೆ—ಹೀಗೆ ಎಲ್ಲವೂ ವ್ಯಾಪಾರವೇ. ಈಗ ಸಮಾಧಿಯನ್ನೂ ಕೊಂಡುಕೊಳ್ಳಬಹುದು!

## ಮಾನವನೂ ವ್ಯಾಪಾರವಸ್ತುವಾಗಿದ್ದಾನೆ

ಈಚೆಗೆ ವ್ಯಕ್ತಿಗಳೂ ಕೊಂಡುಕೊಳ್ಳುವ ವಸ್ತುಗಳಾಗಿದ್ದಾರೆ. ಬೇರೆ ಬೇರೆ ಡಿಗ್ರಿ ಪಡೆಯುವುದರ ಮೂಲಕ ವಿವಿಧ ಕರಕುಶಲತೆಗಳ ಮೂಲಕ, ತಮ್ಮ ನಡೆನುಡಿ ಉಡುಪುಗಳಿಗೆ ಹೆಚ್ಚು ಮೆರುಗು ನೀಡುವುದರ ಮೂಲಕ ಅವರು ತಮ್ಮ ಮಾರಾಟಬೆಲೆ (*sale value*)ಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಮಾನವನು ಕೆಲಸ ಮಾಡುವ ಯಂತ್ರವಾಗಿದ್ದಾನೆ. ಅವನು ಜೀವಂತ ವ್ಯಕ್ತಿಯಾಗಿರದೆ, ಜೀವಂತ ವಸ್ತುವಾಗಿರುವನು. ಅವನ

ಅಂಗಾಂಗಗಳೂ ಮಾರಾಟದ ವಸ್ತುಗಳಾಗಿರುವುವು. ಒಂದು ಸಂಸ್ಥೆಯ ಮುಖ್ಯಸ್ಥನು ತನ್ನ ಕೆಳಗಿನವರನ್ನು ಕೆಲಸದವರೆಂದು ಕಾಣುತ್ತಾನೆಯೇ ಹೊರತು ಮಾನವರೆಂದು ಕಾಣುವುದಿಲ್ಲ. ಅವರಿಂದಾಗುವ ಕೆಲಸ ಅವನಿಗೆ ಮುಖ್ಯವೇ ಹೊರತು, ಅವರ ವೈಯಕ್ತಿಕ ಸುಖದುಃಖ ಗಳಾಗಲಿ, ಜೀವನ ಸಮಸ್ಯೆಗಳಾಗಲಿ ಅವನ ಗಮನಕ್ಕೆ ಬರುವುದೇ ಇಲ್ಲ. ಹಾಗೆಯೇ ಕೈಕೆಳಗಿನವರೂ ಕೂಡ ಮುಖ್ಯಸ್ಥನನ್ನು ಒಂದು ವ್ಯಕ್ತಿಯೆಂದು ಪರಿಗಣಿಸುವುದಿಲ್ಲ. ವ್ಯಕ್ತಿಯ ಉಪಯುಕ್ತತೆಯೇ ಪ್ರಧಾನವಾಗಿ ಮಾನವೀಯತೆ ಕಡೆಗಣಿಸಲ್ಪಡುತ್ತದೆ. ವ್ಯಕ್ತಿಯ ಬೆಲೆ ವ್ಯಾವಹಾರಿಕ ಉಪಯುಕ್ತತೆಯನ್ನು ಅವಲಂಬಿಸುತ್ತದೆಯೇ ಹೊರತು ಅವನ ನಿಜವಾದ ವ್ಯಕ್ತಿತ್ವವನ್ನಲ್ಲ; ವ್ಯಕ್ತಿ ಏನಾಗಿದ್ದಾನೆ ಎಂಬು ದಕ್ಕಿಂತ ಅವನು ಏನು ಮಾಡಬಲ್ಲ ಎಂಬುದು ಮುಖ್ಯವಾಗುತ್ತದೆ. ಅನುಪಯುಕ್ತ ವಸ್ತುಗಳನ್ನು ನಾವು ಕಸದಂತೆ ಎಸೆಯುವಂತೆ ಅನುಪಯುಕ್ತರಾದ ವಯೋವೃದ್ಧರು ಸುಸಜ್ಜಿತ ಕಸದ ಬುಟ್ಟಿಯನ್ನು (ವೃದ್ಧಾಶ್ರಮ) ಸೇರುತ್ತಿದ್ದಾರೆ. ಈಗಿನ ಕಾಲದಲ್ಲಿ ಕಸವನ್ನೂ ರಸವನ್ನಾಗಿ (*recycling*)ಮಾಡುತ್ತಿದ್ದಾರೆ, ಹಾಗೆಯೇ ವೃದ್ಧರನ್ನೂ ಮಾಡಲಾದೀತೆ? ಲಿನ್ ಯುಟಾಂಗ್ (*Lin Yutang*) ಎಂಬ ಚೀನೀ ಲೇಖಕನು ಹೇಳುತ್ತಾನೆ : "ನಾವು ಹಳೆಯ ಮಂದಿರಗಳನ್ನೂ ಹಳೆಯ ಪೀಠೋಪಕರಣಗಳನ್ನೂ ಹಳೆಯ ಬೆಳ್ಳಿಯನ್ನೂ ಹಳೆಯ ನಿಘಂಟು ಗಳನ್ನೂ ಮತ್ತು (ಪುಸ್ತಕದ) ಹಳೆಯ ಮುದ್ರಣಗಳನ್ನೂ ಪ್ರೀತಿಸು ತ್ತೇವೆ, ಆದರೆ ನಾವು ವೃದ್ಧವ್ಯಕ್ತಿಯ ಸೌಂದರ್ಯವನ್ನು ಸಂಪೂರ್ಣ ಮರೆತು ಬಿಟ್ಟಿದ್ದೇವೆ" (*Importance of Living*).

### ಗ್ರಾಹಕ ಮನೋಭಾವ

ಈಗ ಮಾನವನು ತನ್ನನ್ನು ಹೆಚ್ಚು ಹೆಚ್ಚು ಗ್ರಾಹಕನೆಂದು ಗುರುತಿಸಿಕೊಳ್ಳುತ್ತಿದ್ದಾನೆ. ಮಾನವನು ತನ್ನ ಬಗೆಗಿನ ಕಲ್ಪನೆ (*self-image*)ಯಂತೆಯೇ ಆಗುತ್ತಾನೆ ಎಂಬುದು ಮನಃಶಾಸ್ತ್ರದ ಸತ್ಯ. ತನ್ನನ್ನು ರಾಜಕಾರಣಿ ಎಂದು ಪರಿಗಣಿಸಿಕೊಂಡರೆ ಅವನ ಆಗು ಹೋಗುಗಳೆಲ್ಲವೂ,ಮಾತು ಚಿಂತನೆಗಳೆಲ್ಲವೂ ರಾಜಕೀಯದ ಬಣ್ಣದಿಂದ ಕೂಡಿರುತ್ತವೆ. ತನ್ನನ್ನು ಆಧ್ಯಾತ್ಮಿಕ ವ್ಯಕ್ತಿ ಎಂದು ಪರಿ ಗಣಿಸಿಕೊಂಡರೆ ಅದರಂತೆಯೇ ಅವನಾಗುತ್ತಾನೆ. ಹಾಗೆಯೇ ತನ್ನನ್ನು ಗ್ರಾಹಕನೆಂದು ಪರಿಗಣಿಸಿಕೊಂಡರೆ ಎಲ್ಲ ರೀತಿಯಿಂದಲೂ ಅವನು ಗ್ರಾಹಕನೇ ಆಗುತ್ತಾನೆ. ಅಂದರೆ ಅವನು ಎಲ್ಲಾ ವಿಷಯದಲ್ಲಿಯೂ ಸ್ವೀಕರಿಸುವವನಾಗುತ್ತಾನೆಯೇ ಹೊರತು ನೀಡುವವನಾಗುವುದಿಲ್ಲ. ಅವನು ಆಹಾರ ವಸ್ತುಗಳ ಗ್ರಾಹಕನಾಗುತ್ತಾನೆ, ವಿವಿಧ ಗೃಹೋಪ ಯೋಗಿ ವಸ್ತುಗಳ ಗ್ರಾಹಕನಾಗುತ್ತಾನೆ, ವಿಲಾಸ ವಸ್ತುಗಳ ಗ್ರಾಹಕ ನಾಗುತ್ತಾನೆ, ವಿವಿಧ ವಿದ್ಯೆಗಳ ಗ್ರಾಹಕನಾಗುತ್ತಾನೆ, ಸಂಪತ್ತು, ಸ್ಥಾನ ಮಾನಗಳ ಗ್ರಾಹಕನಾಗುತ್ತಾನೆ, ಹಕ್ಕು ಬಾಧ್ಯತೆಗಳ ಗ್ರಾಹಕ ನಾಗುತ್ತಾನೆ. ಕೊನೆಗೆ ಅವನ ಕೊನೆ ಮೊದಲಿಲ್ಲದ ಬೇಡಿಕೆಗಳನ್ನು ತೀರಿಸಲಾಗದೆ ಇಡೀ ವಾಣಿಜ್ಯ ಪದ್ಧತಿಯೇ ಕುಸಿದು ಬೀಳುತ್ತದೆ. ವಾಣಿಜ್ಯವು ತಾನು ನಿರ್ಮಿಸಿದ ಹೊಂಡದಲ್ಲಿ ತಾನೇ ಬೀಳುತ್ತದೆ; ತಾನೇ ಜನರಲ್ಲಿ ಗ್ರಾಹಕ ಮನೋಭಾವವನ್ನು ವೃದ್ಧಿಪಡಿಸಿ, ಅದಕ್ಕೆ ತಾನೇ ಬಲಿಯಾಗುತ್ತದೆ. ಬೇಡಿಕೆ ಮತ್ತು ಪೂರೈಕೆಗಳಲ್ಲಿ ಒಂದು ಸಮತೋಲನವಿಲ್ಲದಿದ್ದರೆ ಸಮಾಜದಲ್ಲಿ ಅರಾಜಕಸ್ಥಿತಿ ಉಂಟಾಗು ತ್ತದೆ. ಉತ್ಪಾದನೆ, ಪೂರೈಕೆ ಮತ್ತು ಬೇಡಿಕೆ ಈ ಮೂರೂ ಒಂದು ನಿರ್ದಿಷ್ಟ ಮಿತಿಯಲ್ಲಿದ್ದರೆ ಆಗ ಸಮಾಜದಲ್ಲಿ ಶಾಂತಿ ನೆಲೆಸಿರುತ್ತದೆ. ಉತ್ಪಾದನೆ ಹೆಚ್ಚಿದಂತೆಲ್ಲ ಬೇಡಿಕೆಯನ್ನು ಹೆಚ್ಚಿಸಬೇಕಾಗುತ್ತದೆ. ಬೇಡಿಕೆ ಹೆಚ್ಚಿದಂತೆಲ್ಲ ಉತ್ಪಾದನೆಯನ್ನು ಹೆಚ್ಚಿಸಬೇಕಾಗುತ್ತದೆ. ಇದು ಕೊನೆ ಮೊದಲಿಲ್ಲದೆ ಮುಂದುವರಿದರೆ ಇಡೀ ಆರ್ಥಿಕ ವ್ಯವ ಸ್ಥೆಯೆ ಕುಸಿದುಬೀಳುತ್ತದೆ.

ಪ್ರತಿಯೊಂದು ವಸ್ತುವಿನಿಂದ ತಾನೇನನ್ನು ಪಡೆಯಬಲ್ಲೆ, ಪ್ರತಿಯೊಬ್ಬ ವ್ಯಕ್ತಿಯಿಂದ ತನಗೆಷ್ಟು ಪ್ರಯೋಜನವಾದೀತು ಎಂಬ ದೃಷ್ಟಿಯಿಂದ ನೋಡುವುದೇ ಗ್ರಾಹಕ ಮನೋಭಾವ. ವಿವಿಧ ಯಂತ್ರಗಳು, ವಿಶೇಷವಾಗಿ ಕಂಪ್ಯೂಟರುಗಳು, ವ್ಯಾವಹಾರಿಕ ದೃಷ್ಟಿಯಿಂದ ಮಾನವನಿಗಿಂತ ಹೆಚ್ಚು ಪ್ರಯೋಜನವುಳ್ಳವುಗಳು. ಆದ್ದರಿಂದ ಯಂತ್ರಗಳೇ ಮುಖ್ಯವಾಗಿ, ಮಾನವ-ಮಾನವ ಸಂಪರ್ಕ ಕಡಿಮೆಯಾಗುತ್ತ ಬರುತ್ತದೆ. ಜನ ಹತ್ತಿರವಿದ್ದೂ ದೂರ ವಾಗುತ್ತಾರೆ. ಎರಿಕ್ ಫ್ರೋಮ್ (*Erich Fromm*) ಹೇಳುವಂತೆ, "ಉಪಯುಕ್ತ ವಸ್ತುಗಳ ಅತ್ಯಧಿಕ ಉತ್ಪಾದನೆಯಿಂದ ಅನುಪಯುಕ್ತ ವ್ಯಕ್ತಿಗಳ ಸಂಖ್ಯೆ ವೃದ್ಧಿಯಾಗುತ್ತದೆ." ಹೀಗೆ ಮನುಷ್ಯನು ತನ್ನ ಗ್ರಾಹಕ ಮನೋಭಾವಕ್ಕೆ ತಾನೇ ಬಲಿಪಶುವಾಗುತ್ತಾನೆ.

**ಉಪಯುಕ್ತ ವಸ್ತುಗಳ ಅತ್ಯಧಿಕ ಉತ್ಪಾದನೆಯಿಂದ ಅನುಪಯುಕ್ತ ವ್ಯಕ್ತಿಗಳ ಸಂಖ್ಯೆ ವೃದ್ಧಿಯಾಗುತ್ತದೆ.**

—ಎರಿಕ್ ಫ್ರೋಮ್ (Erich Fromm)

### ಗ್ರಾಹಕ ಮನೋಭಾವದ ದುಷ್ಪರಿಣಾಮ

ಗ್ರಾಹಕ ಮನೋಭಾವ ವ್ಯಕ್ತಿಗಳನ್ನು ಸ್ವಕೇಂದ್ರಿತರನ್ನಾಗಿ ಮಾಡುತ್ತದೆ, ಪ್ರತಿಯೊಬ್ಬರೂ ತಮಗಾಗಿಯೇ ಬಾಳುತ್ತಾರೆ— ನೆರೆಯವರ ಬೇಕುಬೇಡಗಳ ಕಡೆ ಗಮನವನ್ನೇ ಹರಿಸುವುದಿಲ್ಲ. ವ್ಯಕ್ತಿಹಿತವು ಸಮಾಜದ ಹಿತವನ್ನು ಅವಲಂಬಿಸಿರುತ್ತದೆ ಎಂಬುದನ್ನು ಸಂಪೂರ್ಣ ಮರೆಯುತ್ತಾರೆ. ಸಮಾಜದಲ್ಲಿ ಯಾವುದೇ ಒಂದು ಅಂಗವು ರೋಗಯುಕ್ತವಾಗಿದ್ದರೂ ಸಮಾಜದಲ್ಲಿರುವ ಪ್ರತಿ ಯೊಬ್ಬನೂ ಅದರ ದುಷ್ಪರಿಣಾಮವನ್ನು ಅನುಭವಿಸಬೇಕಾಗು ತ್ತದೆ. ವ್ಯಕ್ತಿಗಳು ಹೆಚ್ಚು ಹೆಚ್ಚು ಸ್ವಾರ್ಥಿಗಳಾದಷ್ಟೂ ಸಮಾಜದಲ್ಲಿ ಅನೈತಿಕತೆ ಅಧಿಕವಾಗುತ್ತದೆ. ನೈತಿಕತೆಯ ಏಕೈಕ ತಳಹದಿಯೇ ನಿಃಸ್ವಾರ್ಥ—ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಸಮಾಜದಲ್ಲಿ ಅನೈತಿಕತೆ ಅಧಿಕವಾದಷ್ಟೂ ಅಶಾಂತಿಯು ಅಧಿಕ ವಾಗುತ್ತದೆ, ಯಾರೂ ನೆಮ್ಮದಿಯಿಂದ ಬಾಳಲಾಗದ ಒಂದು ವಿಷಪೂರಿತ ವಾತಾವರಣ ಸೃಷ್ಟಿಯಾಗುತ್ತದೆ. ಕೊನೆಗೆ ವ್ಯಕ್ತಿಯು ತಾನು ಬೀಸಿದ ಬಲೆಗೆ ತಾನೇ ಬಲಿಯಾಗುತ್ತಾನೆ. ಎಲ್ಲ ಮಾನ ವೀಯ ಸಂಬಂಧಗಳಿಂದಲೂ ದೂರವಾಗಿ ಪ್ರತಿಯೊಬ್ಬರೂ ಪ್ರತಿ ಯೊಬ್ಬರಿಂದಲೂ ಪ್ರತ್ಯೇಕವಾಗುತ್ತಾರೆ. ಇದರಿಂದ ಕುಟುಂಬ ಒಡೆಯುತ್ತದೆ, ಸಂಸ್ಥೆಗಳು ಒಡೆಯುತ್ತವೆ, ಪಕ್ಷಗಳು ಒಡೆಯುತ್ತವೆ,

ರಾಷ್ಟ್ರಗಳು ಒಡೆಯುತ್ತವೆ. ಕ್ರಮೇಣ ಎಲ್ಲವೂ ಪ್ರತ್ಯೇಕ ಪ್ರತ್ಯೇಕವಾಗುತ್ತ ಬಂದು ಸಣ್ಣ ಸಣ್ಣ ಘಟಕಗಳಾಗಿ ಒಡೆಯುತ್ತ ಹೋಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತವೆ. ಒಂದು ವಸ್ತುವನ್ನು ವಿಭಜಿಸುತ್ತ ಹೋದರೆ ಅದು ಅನುಪಯುಕ್ತ ಕಣಗಳಾಗಿ ಪರಿಣಮಿಸುತ್ತದೆ. ಆ ಕಣಗಳೆಲ್ಲ ಕೂಡಿದಾಗಲೇ ಅದು ಉಪಯುಕ್ತವಾದ ವಸ್ತುವಾಗುವುದು. ಹಾಗೆಯೇ ವ್ಯಕ್ತಿಯೂ ಒಂದು ಸಮೂಹದ ಅಂಗವಾಗಿದ್ದಾಗಲೇ ಅವನಿಗೆ ಬೆಲೆ ಬರುತ್ತದೆ. ಅವನು ಒಂದು ಕುಟುಂಬದ, ಒಂದು ಸಂಸ್ಥೆಯ, ಕೊನೆಗೆ ಒಟ್ಟು ಸಮಾಜದ ಅಂಗವಾಗಿರಬೇಕು. ಹಾಗಿಲ್ಲದಿದ್ದರೆ ಅವನು ಒಂಟಿತನದಿಂದ ನರಳಬೇಕಾಗುತ್ತದೆ. ಸಮಾಜದ ನಡುವೆ ಇದ್ದರೂ ಅದರಲ್ಲಿ ತನ್ನ ಅರ್ಥವನ್ನು ಕಾಣಲಾಗದೆ ಒಂಟಿತನವನ್ನು ಅನುಭವಿಸುತ್ತಾನೆ. ಇದು ಅನೇಕ ಮಾನಸಿಕ ರೋಗಗಳಿಗೆ ಕಾರಣವಾಗುತ್ತದೆ. ಡಾ. ಡೀನ್ ಆರ್ನಿಶ್ (*Dean Ornish*) ಹೇಳುತ್ತಾರೆ: "ನಮ್ಮ ಸಂಸ್ಕೃತಿಯ ನಿಜವಾದ ಪಿಡುಗು ಎಂದರೆ ಕೇವಲ ಭೌತಿಕ ಹೃದ್ರೋಗವಲ್ಲ, ನಾನು ಯಾವುದನ್ನು ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಹೃದ್ರೋಗ ಎಂದು ಕರೆಯುತ್ತೇನೋ ಅದು—ಅಂದರೆ ಒಂಟಿತನದ, ಪ್ರತ್ಯೇಕತೆಯ, ಪರಕೀಯತೆಯ ಮತ್ತು ವಿಷಾದದ ಗಾಢ ಭಾವದಿಂದ ಜನ ನರಳುತ್ತಿರುವುದು. ಪರಸ್ಪರ ಸಂಬಂಧದ ಮತ್ತು ಸಾಮೂಹಿಕತೆಯ ಭಾವದಿಂದ ಜನರನ್ನು ಬೆಸೆಯುತ್ತಿದ್ದ ಹಿಂದಿನ ಸಾಮಾಜಿಕ ರಚನೆಯು ಭಗ್ನವಾಗಿರುವುದರಿಂದ ಈ ಪಿಡುಗು ನಮ್ಮ ಸಂಸ್ಕೃತಿಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ನನ್ನ ದೃಷ್ಟಿಯಲ್ಲಿ ನಮ್ಮ ಸಮಾಜದಲ್ಲಿರುವ ವ್ಯಾಧಿ, ಸಿನಿಕತನ ಮತ್ತು ಹಿಂಸಾತ್ಮಕ ಪ್ರವೃತ್ತಿ—ಇವುಗಳ ಮೂಲಕಾರಣವೇ ಇದು." (*Love and Survival*, ಪು. 12-13)

> **ಮಕ್ಕಳು ಗಂಟೆಗಟ್ಟಳೆ ಟಿವಿ ವೀಕ್ಷಣೆಯ ಮೂಲಕ ತಂದೆ ತಾಯಿಗಳಿಂದಲೂ ವೀಡಿಯೋ ಗೇಮ್ ಮೂಲಕ ತಮ್ಮ ಸಹಪಾಠಿಗಳಿಂದಲೂ ಬೋಧನ ಯಂತ್ರಗಳ ಮೂಲಕ ಉಪಾಧ್ಯಾಯರಿಂದಲೂ ಪ್ರತ್ಯೇಕರಾದರೆ ಅವರು ಮಾನವರಾಗಿರುವುದನ್ನು ಕಲಿಯುವುದು ಎಲ್ಲಿ?**
>
> **— ಜೆನಿಫರ್ ಟನಕ** (*Jennifer Tanaka*)

### ಒಂಟಿತನ ಮತ್ತು ಸಾಮೂಹಿಕತೆ

ಈ ಒಂಟಿತನವನ್ನು ಹೋಗಲಾಡಿಸಿಕೊಳ್ಳಲು ಮನುಷ್ಯನು ಇತರರೊಡನೆ, ಸಮಾಜದೊಡನೆ ಅನೇಕ ಬಗೆಯ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಇವುಗಳಲ್ಲಿ ಕೆಲವು ಯೋಗ್ಯವಾದವು, ಮತ್ತೆ ಕೆಲವು ಅಯೋಗ್ಯವಾದವು. ಕೆಲವರು ಯಾವುದೇ ಸಂಘ, ಸಂಸ್ಥೆ ಇಲ್ಲವೇ ಪಕ್ಷ ಅಥವಾ ಧಾರ್ಮಿಕ ಪಂಗಡ ಇವುಗಳಿಗೆ ಸೇರಿಕೊಂಡು ತಮ್ಮ ಒಂಟಿತನವನ್ನು ದೂರವಾಗಿಸಲು ಪ್ರಯತ್ನಿಸುತ್ತಾರೆ. ಭಾಷೆಯ ಹೆಸರಿನಲ್ಲೊ, ರಾಷ್ಟ್ರದ ಹೆಸರಿನಲ್ಲೊ, ಧರ್ಮದ ಹೆಸರಿನಲ್ಲೊ, ಜಾತಿಯ ಹೆಸರಿನಲ್ಲೊ ಅಥವಾ ಜನಾಂಗದ ಹೆಸರಿನಲ್ಲೊ ಮನುಷ್ಯ ಒಂದು ಪಂಗಡವನ್ನು ಕಟ್ಟಿಕೊಂಡು ತನ್ನ ಒಂಟಿತನದಿಂದ ಪಾರಾಗುತ್ತಾನೆ. ಇಂದು ಇಂತಹ ಪಂಗಡಗಳ ಸಂಖ್ಯೆ ಹಲವಾರು. ವಿದ್ಯಾರ್ಥಿಗಳದೇ ಒಂದು ಪಂಗಡ, ರೈತರದೇ ಒಂದು ಪಂಗಡ, ರಿಕ್ಷಾ ಡ್ರೈವರ್‌ಗಳದೇ ಒಂದು ಪಂಗಡ, ಕಾರ್ಮಿಕರದೇ ಒಂದು ಪಂಗಡ, ಗ್ರಾಹಕರದೇ ಒಂದು ಪಂಗಡ—ಹೀಗೆ ಅಸಂಖ್ಯ ಪಂಗಡಗಳಿವೆ.

ಮನುಷ್ಯನ ಭಾವನೆ ಸಂಕುಚಿತವಾದಂತೆಲ್ಲ, ಅವನು ಸ್ವಾರ್ಥಪರನಾದಂತೆಲ್ಲ, ಪಂಗಡಗಳ ಸಂಖ್ಯೆ ಜಾಸ್ತಿಯಾಗುತ್ತ ಹೋಗುತ್ತದೆ. ಇಷ್ಟೇ ಅಲ್ಲದೆ, ಎಷ್ಟೋ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳು ಈ ಪಂಗಡಗಳ ಸಂಖ್ಯಾವೃದ್ಧಿಗೆ ಕಾರಣವಾಗುತ್ತವೆ. ಮತ್ತೆ ಪ್ರತಿಯೊಂದು ಪಂಗಡದವರೂ ತಮ್ಮ ತಮ್ಮ ಹಿತಾಸಕ್ತಿಗಾಗಿ ಹೋರಾಡುತ್ತ ಸಮಾಜದ ಅಸ್ಥಿರತೆಗೆ, ಅರಾಜಕತೆಗೆ ಕಾರಣರಾಗುತ್ತಾರೆ. ಹೀಗೆ ಒಂಟಿತನವನ್ನು ಹೋಗಲಾಡಿಸುವ ಭರದಲ್ಲಿ ಮನುಷ್ಯ ಸಮಾಜದ ಹಿತವನ್ನು ಕಡೆಗಣಿಸುತ್ತಾನೆ. ಸಾಮೂಹಿಕ ಭಾವನೆ ಸಮಾಜದ ಉಳಿತಿಗೆ ಕಾರಣವಾಗುವುದರ ಬದಲು ಕೆಡುಕಿಗೆ ಕಾರಣ ವಾಗುತ್ತದೆ. ವ್ಯಕ್ತಿಯ ಸ್ವಾರ್ಥ ಗುಂಪಿನ ಮೂಲಕ ವ್ಯಕ್ತವಾಗುತ್ತದೆ. ತಾನೊಬ್ಬನೇ ಸಾಧಿಸಲಾಗದ ಸ್ವಾರ್ಥವನ್ನು ಗುಂಪಿನ ಮೂಲಕ ಸಾಧಿಸಲು ಪ್ರಯತ್ನಿಸುತ್ತಾನೆ. ಕೊನೆಗೆ ಗುಂಪಿನೊಳಗೇ ಒಡಕು ಉಂಟಾಗಿ ತಾನು ಯಾವುದಕ್ಕಾಗಿ ಗುಂಪು ಸೇರಿದ್ದನೊ ಆ ಉದ್ದೇಶವೇ ಪರಾಜಿತವಾಗುತ್ತದೆ — ಮತ್ತೆ ಒಂಟಿಯಾಗಿಯೆ ಉಳಿಯುತ್ತಾನೆ.

### ಮಾನವನು ಒಂದು ಯಂತ್ರವಾಗಬಾರದು

ಹೀಗೆ ಸಮಾಜದ ಎಲ್ಲ ಕ್ಷೇತ್ರಗಳ ವ್ಯಾಪಾರೀಕರಣ ಮತ್ತು ಗ್ರಾಹಕ ಮನೋಭಾವ ಎಲ್ಲ ಮಾನವೀಯ ಮೌಲ್ಯಗಳನ್ನೂ ನಾಶಮಾಡುತ್ತವೆ. ಪರಸ್ಪರ ಪ್ರೀತಿ, ಸಹಾನುಭೂತಿ, ಸಹಬಾಳ್ವೆ, ಭ್ರಾತೃತ್ವ ಮನೋಭಾವ—ಈ ಮಾನವೀಯ ಮೌಲ್ಯಗಳು ಹೊರಟು ಹೋದರೆ ಮಾನವ ಜೀವನ ದುಃಸಾಧ್ಯವಾಗುತ್ತದೆ. ಅವನ ಜೀವನ ಯಾಂತ್ರಿಕವಾಗಿ ಎಲ್ಲಕ್ಕೂ ಯಂತ್ರದ ಸಹಾಯವನ್ನೇ ಅವನು ಹೆಚ್ಚಾಗಿ ಬಯಸುತ್ತಾನೆ. ತನ್ನ ಸ್ನೇಹಿತರೊಡನೆ ಆಟವಾಡುವುದರ ಬದಲು ಕಂಪ್ಯೂಟರ್‌ನಲ್ಲಿ ಆಟವಾಡುತ್ತಾನೆ; ಉಪಾಧ್ಯಾಯರ ಮೂಲಕ ಕಲಿಯುವುದರ ಬದಲು ಕಂಪ್ಯೂಟರ್ ಮೂಲಕ ಕಲಿಯುತ್ತಾನೆ; ಕಂಪ್ಯೂಟರ್ ಮೂಲಕ ಮದುವೆಯಾಗುತ್ತಾನೆ; ಕಂಪ್ಯೂಟರ್ ಮೂಲಕ ಮಂತ್ರದೀಕ್ಷೆಯನ್ನು ಪಡೆಯುತ್ತಾನೆ. ಅಡುಗೆ ಮಾಡುವುದಕ್ಕೂ ಯಂತ್ರ, ಕೊನೆಗೆ ಸಂಗೀತ ಹೇಳುವುದಕ್ಕೂ ಯಂತ್ರವೇ. ತಂಬೂರಿಗೆ ಒಂದು ಯಂತ್ರ, ತಬಲಕ್ಕೆ ಇನ್ನೊಂದು ಯಂತ್ರ, ಚಿತ್ರ ಬಿಡಿಸುವುದಕ್ಕೂ ಯಂತ್ರ—ಹೀಗೆ ಎಲ್ಲೆಲ್ಲಿಯೂ ಯಂತ್ರಮಯ. ಜೆನಿಫರ್ ಟನಕರ ಮಾತಿನಲ್ಲಿ "**ಮಕ್ಕಳು ಗಂಟೆಗಟ್ಟಳೆ ಟಿವಿ ವೀಕ್ಷಣೆಯ ಮೂಲಕ ತಂದೆತಾಯಿಗಳಿಂದಲೂ ವೀಡಿಯೋ ಗೇಮ್ ಮೂಲಕ ತಮ್ಮ ಸಹಪಾಠಿಗಳಿಂದಲೂ ಬೋಧನ ಯಂತ್ರಗಳ ಮೂಲಕ ಉಪಾಧ್ಯಾಯರಿಂದಲೂ ಪ್ರತ್ಯೇಕರಾದರೆ ಅವರು ಮಾನವರಾಗಿರುವುದನ್ನು ಕಲಿಯುವುದು ಎಲ್ಲಿ?**"

ಮನುಷ್ಯನು ಯಂತ್ರಸದೃಶ ಜೀವನವನ್ನು ನಡೆಸಬಾರದು. ನಿರ್ದೋಷ ಯಂತ್ರವಾಗಿರುವುದಕ್ಕಿಂತ ದೋಷಪೂರ್ಣ ಮಾನವನಾಗಿರುವುದು ಮೇಲು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನನ್ನ

## ಎಲ್ಲ ನಾಗರಿಕತೆಯ ತಳಹದಿಯೇ ಆತ್ಮಾರ್ಪಣೆ.— ಸ್ವಾಮಿ ವಿವೇಕಾನಂದ

ವೃಷ್ಟಿಯಲ್ಲಿ ಒಬ್ಬ ವ್ಯಕ್ತಿಯು ತನ್ನ ಸ್ವಂತ ಇಚ್ಛೆ ಮತ್ತು ಬುದ್ಧಿಶಕ್ತಿಯಿಂದ ಪ್ರೇರಿತನಾಗಿ ತಪ್ಪು ಮಾಡುವುದು, ಯಂತ್ರದಂತೆ ಒಳ್ಳೆಯದು ಮಾಡುವುದಕ್ಕಿಂತ ಮೇಲು."

ಮನುಷ್ಯನು ಪ್ರಜ್ಞಾಪೂರ್ವಕ ಜೀವನ ನಡೆಸಬೇಕು. ಪ್ರಜ್ಞಾಪೂರ್ವಕ ಜೀವನದ ಒಂದು ಮುಖ್ಯ ಲಕ್ಷಣವೇನೆಂದರೆ ಒಂದು ಉನ್ನತ ಆದರ್ಶವನ್ನು ಹೊಂದಿರುವುದು. ಒಂದು ಯಂತ್ರಕ್ಕೆ ಅಥವಾ ಭೌತವಸ್ತುವಿಗೆ ಯಾವ ಆದರ್ಶವೂ ಇರುವುದಿಲ್ಲ. ಪ್ರಜ್ಞೆಯ ವಿಕಾಸವಾದಂತೆಲ್ಲ ಆದರ್ಶವು ಸ್ಪಷ್ಟವಾಗುತ್ತ ಬರುತ್ತದೆ, ಯಾಂತ್ರಿಕತೆ ಕಡಮೆಯಾಗುತ್ತ ಬರುತ್ತದೆ. ಇದೆಲ್ಲವೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವುದರ ಮೇಲೆ ನಿಂತಿದೆ.

### ತ್ಯಾಗ ಮತ್ತು ಮಾನವೀಯತೆ

ಮಾನವೀಯ ಮೌಲ್ಯಗಳು ಸ್ವಾರ್ಥತ್ಯಾಗವನ್ನು ಅವಲಂಬಿಸಿರುತ್ತವೆ. ವ್ಯಾಪಾರ ಮತ್ತು ಗ್ರಾಹಕ ಮನೋಭಾವ ಈ ತ್ಯಾಗಕ್ಕೆ ವಿರುದ್ಧವಾದುದು; ಅದು ನಾನು ನನ್ನದೆಂಬ ಭಾವವನ್ನು ಪೋಷಿಸುತ್ತದೆ. ನಾನು ನನ್ನದೆಂಬ ಸಂಕುಚಿತ ಪರಿಧಿಯನ್ನು ಮೀರಿಹೋಗದೆ ನಾವು ಯಾವ ಮಾನವೀಯ ಮೌಲ್ಯಗಳನ್ನೂ ಬೆಳೆಸಿಕೊಳ್ಳಲಾರೆವು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಸಮಾಜ ನಿರ್ಮಾಣ, ವಿವಾಹ ಪದ್ಧತಿ, ಮಕ್ಕಳ ಮೇಲಿನ ಪ್ರೀತಿ, ನಮ್ಮ ಸತ್ಕರ್ಮಗಳು, ನೈತಿಕತೆ, ಇವೆಲ್ಲವೂ ತ್ಯಾಗದ ವಿವಿಧ ರೂಪಗಳು. ಪ್ರತಿಯೊಂದು ಸಮಾಜದಲ್ಲಿಯೂ ಮಾನವ ಜೀವನವು ನಮ್ಮ ಇಚ್ಛೆಯನ್ನೂ ಆಸೆ ಆಕಾಂಕ್ಷೆಗಳನ್ನೂ ನಿಗ್ರಹಿಸುವುದರ ಮೇಲೆ ನಿಂತಿದೆ. ಈ ಇಚ್ಛೆಯನ್ನು ಅಥವಾ ಮಿಥ್ಯಾಹಂಕಾರವನ್ನು ಬಿಟ್ಟುಕೊಡುವುದು – ಅಥವಾ ತನ್ನಿಂದ ತಾನು ಹೊರಗೆ ಹೋಗುವುದು – ವಿಷಯಿಯನ್ನು ವಿಷಯೀಕರಿಸುವ ಹೋರಾಟ – ಇವೇ ಎಲ್ಲ ಸಮಾಜಗಳ ಮತ್ತು ಸಾಮಾಜಿಕ ರೂಪಗಳ ವಿವಿಧ ಪ್ರಕಾರಗಳು ಮತ್ತು ಹಂತಗಳು."

ಈ ಮೇಲಿನ ಚರ್ಚೆಯಿಂದ, ಯಾರೂ ವ್ಯಾಪಾರ ಮಾಡಬಾರದೆಂದಾಗಲಿ, ಗ್ರಾಹಕರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಬಾರದೆಂದಾಗಲಿ ಅರ್ಥ ಮಾಡಿಕೊಳ್ಳಬಾರದು. ವ್ಯಾಪಾರ ಮತ್ತು ಗ್ರಾಹಕ ಮನೋಭಾವ ಮಾನವನ ಮನಸ್ಸನ್ನು ಸಂಪೂರ್ಣ ಆವರಿಸಿಕೊಂಡುಬಿಟ್ಟರೆ ಮಾನವೀಯತೆ ನಷ್ಟವಾಗುತ್ತದೆ. ಸಮಾಜವು ಕೇವಲ ಸ್ವಾರ್ಥಸಾಧಕರ ಕಾರ್ಯಕ್ಷೇತ್ರವಾಗುತ್ತದೆ, ಹಾಗೂ ಕ್ರಮೇಣ ಸಮಾಜವು ಶಕ್ತಿಗುಂದುತ್ತದೆ. ಆದ್ದರಿಂದ ಪ್ರತಿಯೊಬ್ಬರನ್ನೂ ಮಾನವರೆಂದು ಗುರುತಿಸುವುದನ್ನು ಕಲಿತು ಮಾನವೀಯ ಮೌಲ್ಯಗಳನ್ನು ನಾವು ಬೆಳೆಸಿಕೊಳ್ಳದಿದ್ದರೆ ಈ ಅನಿಷ್ಟದಿಂದ ನಾವು ಪಾರಾಗಲಾರೆವು. "ಶಿವಜ್ಞಾನೇ ಜೀವಸೇವಾ" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರೂ, ಜೀವಭಾವವನ್ನೇ ಕಳೆದುಕೊಂಡು ಯಂತ್ರಸದೃಶರಾಗುತ್ತಿರುವ ನಾವು ಮೊದಲು ಮಾನವರಾಗಿ ಬಾಳುವುದನ್ನು ಕಲಿಯಬೇಕಾಗಿದೆ. ಅನಂತರವೇ ಮಾನವರಲ್ಲಿ ದೇವರನ್ನು ಕಾಣುವ ಪ್ರಯತ್ನ ಸಫಲವಾದೀತು.

✻

### ಸ್ವಾಮಿ ಅಖಂಡಾನಂದರು ಹೇಳುತ್ತಾರೆ



ಸ್ವಾಮಿ ಅಖಂಡಾನಂದ

ಆಲಂಬಾಜಾರ್ ಮಠದಲ್ಲಿ ಬಹಳ ಸೆಕೆ—ಯಾರಿಗೂ ನಿದ್ರೆ ಬರುತ್ತಿಲ್ಲ. ಬೆವತು ಎಲ್ಲರ ಹೊದಿಕೆಯೂ ಒದ್ದೆಯಾಗಿದೆ. ನಾನು ಎದ್ದು ಬೀಸಣಿಗೆಯಿಂದ ಎಲ್ಲರಿಗೂ ಗಾಳಿ ಬೀಸತೊಡಗಿದೆ. ಆಗ ಬೆವರುವುದು ನಿಂತಿತು. ಎಲ್ಲರೂ ಶಾಂತಿಯಿಂದ ನಿದ್ರೆ ಮಾಡಿದರು. ಆದರೆ ಆಶ್ಚರ್ಯವೇನೆಂದರೆ ನನ್ನ ದೇಹವೂ ಅರ್ಧಗಂಟೆಯಲ್ಲಿಯೇ ತಣ್ಣಗಾಯಿತು. ಆಗ ನನಗೆ ಅನ್ನಿಸಿತು : ಜನರ ಸುಖವೇ ನನ್ನ ಸುಖ. ಹತ್ತು ಜನರಲ್ಲಿ ನಾನೊಬ್ಬ. ಜನರ ಸೇವೆಯೇ ಶ್ರೀರಾಮಕೃಷ್ಣರ ಸೇವೆ. ಎಲ್ಲರಿಗೂ ಗಾಳಿ ಬೀಸಿದೆ. ಅವರು ಸುಖವಾಗಿ ನಿದ್ರಿಸತೊಡಗಿದಾಗ ನನ್ನ ಆಯಾಸವೂ ದೂರವಾಯಿತು.

(ಸ್ವಾಮಿ ಅಖಂಡಾನಂದೇರ್ ಸ್ಮೃತಿ-ಸಂಚಯ್ ಎಂಬ ಬಂಗಾಳಿ ಪುಸ್ತಕದಿಂದ, ಅನುವಾದ : ಪಿ. ಉಷಾ)

*ಸೆಪ್ಟೆಂಬರ್ ೧೭, ಸ್ವಾಮಿ ಅಖಂಡಾನಂದರ ಜಯಂತಿ*